ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017–18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:11-08-2017,

## ಸುತ್ತೋಲೆ

ವಿಷಯ:, ದಿನಾಂಕ:19-08-2017 ರ ಶನಿವಾರ ಸದ್ಭಾವನಾ ದಿನವನ್ನಾಗಿ ಮತ್ತು ದಿನಾಂಕ :19-08-2017 ರಿಂದ 02-09-2017ರವರೆಗೆ ಕೋಮು ಸೌಹಾರ್ದ ಪಾಕ್ಷಿಕ ಅನ್ನು ಆಚರಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ/01/ರಾಐಸ/2017ದಿನಾಂಕ:01-08-2017
2) ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆ: ಯುಸೇಇ/ರಾಸೇಯೋ/ಸದಿ/2017-18/177 ದಿನಾಂಕ: 08.08.2017

*****

ಮೇಲಿನ ವಿಷಯ ಹಾಗೂ ಉಲ್ಲೇಖಿತ ಪತ್ರಕ್ಕನುಸಾರ ಸದ್ಭಾವನೆಯನ್ನು ಮೂಡಿಸಿ ಹಿಂಸಾಚಾರವನ್ನು ತ್ಯಜಿಸುವಂತೆ ಮಾಡಲು ಕೇಂದ್ರ ಸರ್ಕಾರದ ಆದೇಶದಂತೆ ಪ್ರತಿ ವರ್ಷ 20ನೇ ಆಗಸ್ಟ್ ರಂದು ಸದ್ಭಾವನಾ ದಿನವನ್ನಾಗಿ ಆಚರಿಸಲಾಗುತ್ತಿದೆ. ಆದರೆ ಈ ಸಾಲಿನಲ್ಲಿ ದಿನಾಂಕ:20-08-2017 ಭಾನುವಾರ ಸಾರ್ವತ್ರಿಕ ರಜಾ ದಿನವಾಗಿರುವುದರಿಂದ, ಈ ವರ್ಷ ದಿನಾಂಕ:19-08-2017 ರ ಶನಿವಾರ ದಂದು ಸದ್ಭಾವನೆ ದಿನವನ್ನಾಗಿ ಮತ್ತು ದಿನಾಂಕ:19-08-2017 ರಿಂದ ದಿನಾಂಕ:02-09-2017 ರವರೆಗೆ ಕೋಮು ಸೌಹಾರ್ದ ಪಾಕ್ಷಿಕ (Communal Harmony Fortnight) ದಿನವನ್ನಾಗಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ ಆಚರಿಸಲು ಸೂಚಿಸಲಾಗಿದೆ, ಸದ್ಭಾವನಾ ಪ್ರತಿಜ್ಞೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ.

ಕಾರ್ಯಕ್ರಮವನ್ನು ನಡೆಸಿದ ಬಗ್ಗೆ ಒಂದು ವರದಿಯನ್ನು ರಾಷ್ಟ್ರೀಯ ಸೇವಾ ಯೋಜನೆಯ ಕಛೇರಿಗೆ ಕಳುಹಿಸಬೇಕೆಂದು ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

ನಿರ್ದೇಶಕರು,

ಪ್ರತಿ:-

1. ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, **ಇಂಜನಿಯರಿಂಗ್ ಕಾಲೇಜು** ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ
2. ಸರ್ಕಾರದ ಅಧೀನ ಕಾರ್ಯದರ್ಶಿ ಸಿಆಸುಇ ರಾಜಕೀಯ
3. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಯುವಜನ ಸೇವಾಇಲಾಖೆ ಬೆಂಗಳೂರು-01
4. ಇ-ಆಡಳಿತ ವಿಭಾಗಕ್ಕೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ

# ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಭೇದಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಭೇದಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇವೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.